# ಫ್ಲಿಪ್ ಕಾರ್ಟ್ ನ ಅಂಗಸಂಸ್ಥೆ ಇಕಾರ್ಟ್ ಲಾಜಿಸ್ಟಿಕ್ ನಿಂದ ಸಮಗ್ರ ಪೂರೈಕೆ ಜಾಲ ಪರಿಹಾರಗಳ ಘೋಷಣೆ

- **ಈ ಮೂಲಕ ವ್ಯವಹಾರಗಳ ಬಲವರ್ಧನೆಗೆ ಪೂರಕವಾದ ಕಾರ್ಯಕ್ರಮಗಳ ಅನುಷ್ಠಾನ**

ಬೆಂಗಳೂರು, ಏಪ್ರಿಲ್ 28, 2022:ಫ್ಲಿಪ್ ಕಾರ್ಟ್ ಗ್ರೂಪ್ ನ ಪೂರೈಕೆ ಜಾಲವಾಗಿರುವ ಇಕಾರ್ಟ್ ಲಾಜಿಸ್ಟಿಕ್ ದೇಶಾದ್ಯಂತ ಇರುವ ಬ್ರ್ಯಾಂಡ್ ಗಳು, ಪ್ಲಾಟ್ ಫಾರ್ಮ್ ಗಳು ಮತ್ತು ಸಣ್ಣ ಹಾಗೂ ದೊಡ್ಡ ವ್ಯವಹಾರಗಳಿಗೆ ಸಮಗ್ರ ಎಂಡ್ ಟು ಎಂಡ್ ಪೂರೈಕೆ ಸರಪಳಿಯ ಪರಿಹಾರಗಳನ್ನು ನೀಡುವುದಾಗಿ ಘೋಷಣೆ ಮಾಡಿದೆ. ಇದರಲ್ಲಿ ಲಾಜಿಸ್ಟಿಕ್ ಮತ್ತು ದಾಸ್ತಾನು ಪರಿಹಾರಗಳೂ ಸೇರಿವೆ. ತನ್ನ ಅನುಭವ ಮತ್ತು ತಂತ್ರಜ್ಞಾನ ಆಧಾರಿತ ಮೂಲಸೌಕರ್ಯಗಳ ಮೂಲಕ ವ್ಯವಹಾರಗಳಿಗೆ ತಮ್ಮ ಗ್ರಾಹಕರನ್ನು ತಡೆರಹಿತವಾಗಿ ಸಂಪರ್ಕಿಸಲು ನೆರವಾಗಲಿದೆ.

2009 ರಲ್ಲಿ ಆರಂಭವಾದ ಇಕಾರ್ಟ್ ಭಾರತದ ಇ-ಕಾಮರ್ಸ್ ಪೂರೈಕೆ ಸರಪಳಿ ಮತ್ತು ಲಾಜಿಸ್ಟಿಕ್ ಉದ್ಯಮದಲ್ಲಿ ಮುಂಚೂಣಿಯಲ್ಲಿರುವ ಸಂಸ್ಥೆಯಾಗಿದೆ. ಕಳೆದ ಹಲವು ವರ್ಷಗಳಿಂದ ಭಾರತದಲ್ಲಿ ವಿಕಸನಗೊಳ್ಳುತ್ತಿರುವ ಡಿಜಿಟಲ್ ಆರ್ಥಿಕತೆ ಮತ್ತು ರೀಟೇಲ್ ಲ್ಯಾಂಡ್ ಸ್ಕೇಪ್ ಗೆ ಅನುಗುಣವಾಗಿ ವ್ಯಾಪಾರವು ವಿಕಸನಗೊಂಡಿದೆ ಮತ್ತು ಪರಿವರ್ತನೆಯಾಗಿದೆ. ಅದೇ ರೀತಿ, ಮೂಲಸೌಕರ್ಯ ಮತ್ತು ಅತ್ಯಾಧುನಿಕ ಬುದ್ಧಿಮತ್ತೆಯ ದೊಡ್ಡ ಹೆಜ್ಜೆ ಗುರುತಿನಿಂದ ಬೆಂಬಲಿತವಾಗಿರುವ ತಂತ್ರಜ್ಞಾನ-ಶಕ್ತಗೊಂಡ ಭಾರತದಾದ್ಯಂತ ಪೂರೈಕೆ ಸರಪಳಿಯನ್ನು ಅಭಿವೃದ್ಧಿಪಡಿಸಿದ ಹಿರಿಮೆಯನ್ನು ಹೊಂದಿದೆ.

ಇಕಾರ್ಟ್ ಈಗ ಬ್ರ್ಯಾಂಡ್ ಗಳು, ಪ್ಲಾಟ್ ಫಾರ್ಮ್ ಗಳು ಮತ್ತು ವ್ಯವಹಾರಗಳಿಗೆ ಡ್ರಾಪ್ ಶಿಪ್, ದಾಸ್ತಾನು ನಿರ್ವಹಣೆ, ವಿತರಣೆ, ಒಟ್ಟುಗೂಡುಸುವಿಕೆ ಮತ್ತು ಇನ್ನೂ ಹೆಚ್ಚಿನ ವೈಶಿಷ್ಟ್ಯತೆಗಳನ್ನು ಒಳಗೊಂಡಂತೆ ಎಂಡ್-ಟು-ಎಂಡ್ ಪೂರೈಕೆ ಸರಪಳಿಯ ನಿರ್ವಹಣೆಯ ಸೌಲಭ್ಯವನ್ನು ನೀಡುತ್ತದೆ. ಈ ಎಲ್ಲಾ ಸೇವೆಗಳನ್ನು ಕಂಪನಿಯು ತನ್ನ ಹಲವು ವರ್ಷಗಳ ವ್ಯಾಪಕ ಅನುಭವದ ಆಧಾರದ ಮೇಲೆ ರಚಿಸಿದೆ. ಇದರ ಜೊತೆಗೆ ಫ್ಲಿಪ್ ಕಾರ್ಟ್ ನ ಮತ್ತೊಂದು ಅಂಗಸಂಸ್ಥೆಯಾಗಿರುವ ಜೀವ್ಸ್ ದೇಶಾದ್ಯಂತ ತನ್ನ ಪರಿಣತ ತಾಂತ್ರಿಕ ಕೆಲಸಗಾರರ ಮೂಲಕ ಬ್ರ್ಯಾಂಡ್ ಗಳ ಮಾರಾಟದ ನಂತರ ಎಂಡ್-ಟು-ಎಂಡ್ ಪರಿಹಾರಗಳನ್ನು (ಅನುಸ್ಥಾಪನೆ, ಡೆಮೋ ಮತ್ತು ದುರಸ್ತಿ ಸೇವೆಗಳು) ಒದಗಿಸುತ್ತದೆ.

ವ್ಯವಹಾರಗಳನ್ನು ಬೆಂಬಲಿಸುವುದರೊಂದಿಗೆ ಮತ್ತು ಎಂಡ್-ಟು-ಎಂಡ್ ಸೇವೆಗಳನ್ನು ನೀಡುವ ಮತ್ತು ಮಾರಾಟದ ನಂತರದಲ್ಲಿನ ತಡೆರಹಿತ ಸೇವೆಗಳನ್ನು ನಿರ್ವಹಣೆ ಮಾಡುವ ಮೂಲಕ ಇಕಾರ್ಟ್ ಮತ್ತು

ಜೀವ್ಸ್ ಎಲ್ಲಾ ಮಾದರಿಯ ಬ್ರ್ಯಾಂಡ್ ಗಳು ಮತ್ತು ವ್ಯವಹಾರಗಳನ್ನು ನಾವೀನ್ಯತೆ ಹಾಗೂ ಬೆಳವಣಿಗೆಗೆ ಮುಖ್ಯವಾದ ಕಾರ್ಯಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತವೆ. ಈ ಮೂಲಕ ದೇಶಾದ್ಯಂತದ ರೋಮಾಂಚಕಾರಿ ಡಿಜಿಟಲ್ ವಾಣಿಜ್ಯ ಪರಿಸರ ವ್ಯವಸ್ಥೆಯ ಬೆಳವಣಿಗೆಗೆ ಬೆಂಬಲ ನೀಡಲು ಸಹಾಯ ಮಾಡುತ್ತವೆ.

ಇಕಾರ್ಟ್ ಪ್ರಸ್ತುತ ಫುಲ್ ಫಿಲ್ಮೆಂಟ್ ಸೆಂಟರ್ ಗಳು, ಮದರ್ ಹಬ್ ಗಳು ಅಥವಾ ವಿಂಗಡಣಾ ಕೇಂದ್ರಗಳ ಸ್ಥಾಪನೆಯಲ್ಲಿ ಪ್ರಗತಿಯನ್ನು ಸಾಧಿಸುತ್ತಿದೆ ಮತ್ತು ವಿಸ್ತಾರವಾದ ಜಾಲವನ್ನು ಹೊಂದಿದೆ. ದೇಶಾದ್ಯಂತ ಸಾವಿರಾರು ಡೆಲಿವರಿ ಹಬ್ ಗಳನ್ನು ಹೊಂದಿದ್ದು, ಪ್ರಸ್ತುತ ಒಂದು ತಿಂಗಳಿಗೆ 100 ಮಿಲಿಯನ್ ಗೂ ಅಧಿಕ ಸಾಗಣೆಗಳನ್ನು ಗ್ರಾಹಕರಿಗೆ ತಲುಪಿಸುತ್ತಿದೆ. ದೇಶಾದ್ಯಂತ ಇರುವ ಪಿನ್ ಕೋಡ್ ಗಳು, ರೋಬೋಟಿಕ್ ವ್ಯವಸ್ಥೆ, ಸ್ವಯಂಚಾಲಿತ ಪ್ಯಾಕೇಜಿಂಗ್ ಮತ್ತು ವಿಳಾಸ ಬುದ್ಧಿಮತ್ತೆಯ ಆಧಾರದಿಂದ ಸರಕುಗಳನ್ನು ಸ್ವಯಂಚಾಲಿತವಾಗಿ ವಿಂಗಡಣೆ ಮಾಡಲು ಕ್ರಾಸ್-ಬೆಲ್ಟ್ ಸಾರ್ಟರ್ ಗಳು ಮತ್ತು ಸ್ವಯಂ ಚಾಲಿತ ಮಾರ್ಗದರ್ಶಿ ವಾಹನಗಳು ಸೇರಿದಂತೆ ದೇಶೀಯವಾಗಿ ತಯಾರಿಸಿದ ಅತ್ಯುತ್ತಮ ತಂತ್ರಜ್ಞಾನಗಳನ್ನು ಬಳಸಿಕೊಳ್ಳುತ್ತಿದೆ. ಈ ಮೂಲಕ ಮೌಲ್ಯವರ್ಧಿತ ಜಾಲ, ವ್ಯಾಪಾರದಾದ್ಯಂತ ನಿಖರವಾದ ಮತ್ತು ವೇಗದ ಚಲನೆಗಾಗಿ ತಮ್ಮ ಲಾಜಿಸ್ಟಿಕ್ಸ್ ಅವಶ್ಯಕತೆಗಳಿಗೆ ವಿಶ್ವಾಸಾರ್ಹವಾದ ಪಾಲುದಾರರನ್ನು ಒದಗಿಸುವ ಸಣ್ಣ ಮತ್ತು ಮಧ್ಯಮ ವ್ಯವಹಾರಗಳಿಗೆ ತನ್ನ ಸಾಮರ್ಥ್ಯವನ್ನು ವಿಸ್ತರಿಸುತ್ತಾ ಬಂದಿದೆ. ಕ್ಯಾಶ್ ಆನ್ ಡೆಲಿವರಿ, ಕ್ಯೂಆರ್ ಆಧಾರಿತ ಪಾವತಿ, ಓಪನ್ ಬಾಕ್ಸ್ ಡೆಲಿವರಿ, ಟೆಕ್-ವಿಸಿಟ್ ಮತ್ತು ಮರು ಆವಿಷ್ಕಾರದಲ್ಲಿ ಇಕಾರ್ಟ್ ಒದಗಿಸುತ್ತಿರುವ ಸೇವೆಗಳ ಸೂಟ್, ಬ್ರ್ಯಾಂಡ್ ಗಳು, ಪ್ಲಾಟ್ ಫಾರ್ಮ್ ಗಳು ಮತ್ತು ಸಣ್ಣ ಹಾಗೂ ದೊಡ್ಡ ವ್ಯವಹಾರಗಳಿಗೆ ಅವರ ಎಲ್ಲಾ ಪೂರೈಸುವಿಕೆಯ ಅಗತ್ಯತೆಗಳೊಂದಿಗೆ ಸೇವೆ ಸಲ್ಲಿಸಲು ನೆರವಾಗುತ್ತಿದೆ.

ಇಕಾರ್ಟ್ ನ ಹಿರಿಯ ಉಪಾಧ್ಯಕ್ಷ ಹೇಮಂತ್ ಬದ್ರಿ ಅವರು ಈ ಬಗ್ಗೆ ಮಾತನಾಡಿ, ``ದೇಶೀಯವಾಗಿ ಬೆಳೆಯುತ್ತಿರುವ ಸಮೂಹ ಸಂಸ್ಥೆಯಾಗಿರುವ ನಾವು ಭಾರತದಲ್ಲಿ ಡಿಜಿಟಲ್ ಆರ್ಥಿಕತೆಯ ಬೆಳವಣಿಗೆಗೆ ಬದ್ಧರಾಗಿದ್ದೇವೆ. ನಮ್ಮ ಸಂಸ್ಥೆಯು ವ್ಯವಹಾರಗಳು ಬೆಳವಣಿಗೆ ಹೊಂದಲು ಮತ್ತು ಮಾಪನ ಮಾಡಲು ನೆರವಾಗುವ ಬಲವಾದ ಮತ್ತು ವಿಶ್ವಾಸಾರ್ಹವಾದ ಪೂರೈಕೆ ಸರಪಳಿಯ ಅವಿಭಾಜ್ಯವಾಗಿದೆ. ದೇಶದಲ್ಲಿ ಇ-ಕಾಮರ್ಸ್ ಉದ್ಯಮದೊಂದಿಗೆ ಬೆಳವಣಿಗೆ ಹೊಂದಿರುವ ಮತ್ತು ವಿಕಸನಗೊಂಡ ಪೂರೈಕೆ ಸರಪಳಿಯಾಗಿ ನಾವು ಭಾರತೀಯ ಮಾರುಕಟ್ಟೆಯಲ್ಲಿ ಇರುವ ಅನನ್ಯವಾದ ಅವಕಾಶಗಳು ಮತ್ತು ಸವಾಲುಗಳನ್ನು ಅರ್ಥ ಮಾಡಿಕೊಂಡಿದ್ದೇವೆ. ಇದಕ್ಕೆ ಪೂರಕವಾಗಿ ವ್ಯವಹಾರಗಳಿಗೆ ಅತ್ಯಂತ ಪರಿಣಾಮಕಾರಿಯಾದ ವಿತರಣಾ ಸೇವೆಯನ್ನು ಒದಗಿಸಲು ವಿಕಸನಗೊಳ್ಳುವತ್ತ ಗಮನಹರಿಸಿದ್ದೇವೆ. ನಮ್ಮ ತಂತ್ರಜ್ಞಾನ-ಚಾಲಿತವಾದ ವಿಶ್ವಾಸಾರ್ಹ ಪೂರೈಕೆ

ಜಾಲದ ಮೂಲಕ ದೇಶದೆಲ್ಲೆಡೆ ಇರುವ ನಮ್ಮ ಗ್ರಾಹಕರು ಮತ್ತು ಗ್ರಾಹಕರನ್ನು ತಲುಪಲು ಬಯಸುತ್ತಿರುವ ಸಣ್ಣ, ಮಧ್ಯಮ ಮತ್ತು ದೊಡ್ಡ ವ್ಯವಹಾರಗಳಿಗೆ ನಮ್ಮ ಆಳವಾದ ಪರಿಣತಿ ಮತ್ತು ಸಾಮರ್ಥ್ಯಗಳನ್ನು ಒದಗಿಸಲು ನಾವು ಸಂತೋಷಪಡುತ್ತೇವೆ" ಎಂದರು.

ತನ್ನ ಕಾರ್ಯಾಚರಣೆಗಳೊಂದಿಗೆ ಇಕಾರ್ಟ್ ದೇಶಾದ್ಯಂತ 2,00,000 ಅಧಿಕ ಜನರಿಗೆ ನೇರ ಅಥವಾ ಪರೋಕ್ಷ ಉದ್ಯೋಗವನ್ನು ಒದಗಿಸಿದೆ. ಒಂದು ಉತ್ತಮ ಉದ್ಯೋಗದಾತ ಸಂಸ್ಥೆಯಾಗಿರುವ ಇಕಾರ್ಟ್ ಅತ್ಯುತ್ತಮ ಮಹಿಳಾ ಕಾರ್ಮಿಕರನ್ನು ಹೊಂದಿದ್ದು, ಅವರಿಗೆ ಸೂಕ್ತವಾದ ಪಾಳಿಗಳನ್ನು ರೂಪಿಸಿದೆ. ಅಲ್ಲದೇ, ಮಹಿಳೆಯರಿಂದಲೇ ನಿರ್ವಹಣೆ ಮಾಡುವ ಕಾರ್ಯಾಚರಣೆಗಳನ್ನು ಹೊಂದಿದೆ. ಕಂಪನಿಯು ತನ್ನ ವಿವಿಧತಾ ಎಂಬ ಕಾರ್ಯಕ್ರಮದ ಮೂಲಕ ತನ್ನ ಪೂರೈಕೆ ಸರಪಳಿಯಲ್ಲಿ ಮಹಿಳೆಯರು ಹೆಚ್ಚು ಹೆಚ್ಚು ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಇದೇ ವೇಳೆ, ಇಕಾರ್ಟ್ ವಿಕಲಚೇತನರಿಗೆ ಅರ್ಥಪೂರ್ಣವಾದ ಉದ್ಯೋಗಾವಕಾಶಗಳನ್ನೂ ಕಲ್ಪಿಸಿದೆ. ಪರಿಸರ ಸುಸ್ಥಿರತೆಗೆ ಆದ್ಯತೆ ನೀಡಿರುವ ಇಕಾರ್ಟ್, 2030 ರ ವೇಳೆಗೆ ತನ್ನ ಪೂರೈಕೆ ಜಾಲದಲ್ಲಿ ಸಂಪೂರ್ಣ 100% ರಷ್ಟು ಎಲೆಕ್ಟ್ರಿಕ್ ವಾಹನಗಳನ್ನು ಬಳಕೆ ಮಾಡಿಕೊಳ್ಳುವ ಬದ್ಧತೆಯನ್ನು ಹೊಂದಿದೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, Flipkart Wholesale, Flipkart Health+ and Cleartrip. The Group is also a majority shareholder in PhonePe, one of the leading Payments Apps in India.

Started in 2007, Flipkart has enabled millions of consumers, sellers, merchants, and small businesses to be a part of India's digital commerce revolution, with a registered customer base of more than 400 million, offering over 150 million products across 80+ categories. Our efforts to democratize commerce in India, drive access and affordability, delight customers, create lakhs of jobs in the ecosystem, and empower generations of entrepreneurs and MSMEs have inspired us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations have made online shopping more accessible and affordable for millions of Indians. Together with its group companies, Flipkart is committed to transforming commerce in India through technology.

**For more information, please write to media@flipkart.com**